
## ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ.ಶಿವಮೊಗ್ಗ:ತಾ

**ತರಗತಿ:4** **ವಿಷಯ:ಕನ್ನಡ** **ಮಾರ್ಗದರ್ಶಕರು:ಶ್ರೀ ಸೋಮಲಿಂಗಪ್ಪ ಜೆ**


# ಕನ್ನಡಮ್ಮನ ಹರಕೆ

## ಈ ಪದ್ಯವನ್ನು ಕೇಳಿರಿ ಮತ್ತು ರಾಗವಾಗಿ ಹಾಡಲು ಪ್ರಯತ್ನಿಸಿರಿ:

**ಹಾಡಿದವರು: ಅನನ್ಯ, ಲಿಖಿತ,ಧನುಷ್,ಸಾನಿಯಾ,ಕೋಮಲ ಮತ್ತು ಶಿವಕುಮಾರ್**



**ಪದ್ಯವನ್ನು ಕೇಳಲು ಇಲ್ಲಿ ಕ್ಲಿಕ್ಕಿಸಿರಿ:**


ಪಾಠ – ೧

ಕನ್ನಡಮ್ಮನ ಹರಕೆ (ಪದ್ಯ)

V1T5C2

ಕಲಿಕೆಗೆ ದಾರಿ :

ಕನ್ನಡ ನಾಡಿನ ಬಗ್ಗೆ ನಿಮಗೆ ತಿಳಿದಿರುವ ಒಂದು ಹಾಡನ್ನು ತರಗತಿಯಲ್ಲಿ ರಾಗವಾಗಿ ಹಾಡಿರಿ.

ಕನ್ನಡಕೆ ಹೋರಾಡು
ಕನ್ನಡದ ಕಂದಾ;
ಕನ್ನಡವ ಕಾಪಾಡು
ನನ್ನ ಆನಂದಾ ।

ಜೋಗುಳದ ಹರಕೆಯಿದು
ಮರೆಯದಿರು, ಚಿನ್ನಾ;
ಮರೆತೆಯಾದರೆ ಅಯ್ಯೊ
ಮರೆತಂತೆ ನನ್ನ ।

ಮೊಲೆಯ ಹಾಲಿಂತಂತೆ
ಸವಿಜೇನು ಬಾಯ್ಗೆ;
ತಾಯಿಯಪ್ಪುಗೆಯಂತೆ
ಬಲುಸೊಗಸು ಮೆಯ್ಗೆ ।

ಗುರುವಿನೊಳ್ನುಡಿಯಂತೆ
ಶ್ರೇಯಸ್ಸು ಬಾಳ್ಗೆ;
ತಾಯ್ನುಡಿಗೆ ದುಡಿದು ಮಡಿ
ಇಹಪರಗಳೇಳ್ಗೆ ।

ದಮ್ಮಯ್ಯ ಕಂದಯ್ಯ
ಬೇಡುವೆನು ನಿನ್ನ;
ಕನ್ನಡಮ್ಮನ ಹರಕೆ,
ಮರೆಯದಿರು, ಚಿನ್ನಾ ।

ಮರೆತೆಯಾದರೆ ಅಯ್ಯೊ;
ಮರೆತಂತೆ ನನ್ನ;
ಹೋರಾಡು ಕನ್ನಡಕೆ
ಕಲಿಯಾಗಿ, ರನ್ನಾ ।

– ಕುವೆಂಪು

LIVEWORKSHEETS